ಓ. ಎಸ್. ನಂಃ 68/2016

ಪಿ.ಡಬ್ಲ್ಯೂಃ 1

ದಿಃ 12-02-2020 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎ. ಎ. ಜಿ. ಪ್ರತಿವಾದಿ ಪರ ವಕೀಲರಿಂದಃ

ನನ್ನ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ ಅದರಲ್ಲಿರುವ ವಿಷಯ ನನಗೆ ಗೊತ್ತಿರುತ್ತದೆ. ದಾವಾ ಆಸ್ತಿಯ ರಿ. ಸ. ನಂಃ 46/6 ರ ಕ್ಷೇತ್ರ 38 ಗುಂಟೆ ಇರುತ್ತದೆ. ದಾವಾ ಆಸ್ತಿಯ ಚಕಬಂದಿ ಪೂರ್ವಕ್ಕೆ ನಮ್ಮದೇ ಆದ ರಿ.ಸ. ನಂಃ 46/3 ರ ಜಮೀನು ಇದೆ. ಪಶ್ಚಿಮಕ್ಕೆ ಕಾಲುವೆ ಇದೆ. ಉತ್ತರಕ್ಕೆ ಶಿವನಗೌಡ ಹೆಬ್ಬಾಳ ಇವರ ಜಮೀನು ಹಾಗೂ ದಕ್ಷಿಣಕ್ಕೆ ಪ್ರತಿವಾದಿಯರ ಜಮೀನು ಇರುತ್ತದೆ. ಪೂರ್ವಕ್ಕೆ ನಮ್ಮದೇ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಪೂರ್ವಕ್ಕೆ ಈರಪ್ಪ ಎಳೆಗಾರ ಇವರ ಜಮೀನು ಇದೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ನನ್ನ 38 ಗುಂಟೆ ಜಮೀನಿನ ಕುರಿತು ಸಲ್ಲಿಸಿರುತ್ತೇನೆ. ನನ್ನ ಜಮೀನು 38 ಗುಂಟೆ ಕಡಿಮೆ ಆಗಿದೆ ಎಂದು ನನಗೆ 2000 ನೇ ಇಸವಿಯ ನಂತರ ತಿಳಿದು ಬಂದಿರುತ್ತದೆ. ನಮ್ಮ 1 ಎಕರೆ ಜಮೀನಿಗೆ 40 ಕೆ.ಜಿ. ಬತ್ತ ಉಳುಮೆ ಮಾಡುತ್ತಿದ್ದೇವು ಆದರೆ ಈಗ ಕಡಿಮೆ ಬತ್ತ ಉಳುಮೆ ಮಾಡುತ್ತಿರುವುದರಿಂದ ನಮ್ಮ ಜಮೀನು ಕಡಿಮೆ ಆಗಿದೆ ಎಂದು ತಿಳಿದು ಬಂದಿರುತ್ತದೆ. ನಮ್ಮ ಜಮೀನು ಕಡಿಮೆ ಆಗದೆ ಇದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನು ಕಡಿಮೆ ಆಗಿದೆ ಎಂದು ಅದರ ಅಳತೆ ಮಾಡಲು ಭೂ ಇಲಾಖೆಗೆ 2001 ನೇ ಇಸವಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿ ಮೇರೆಗೆ ಭೂ ಇಲಾಖೆಯವರು 2004 ನೇ ಇಸವಿಯಲ್ಲಿ ಬಂದು ಅಳತೆಯನ್ನು ಮಾಡಿರುತ್ತಾರೆ. ಸದರಿ ಅಳತೆ ಮಾಡುವ ಸಮಯದಲ್ಲಿ ಪಕ್ಕದ ಜಮೀನದವರು ಇರಲಿಲ್ಲ ಎಂದರೆ ಸಾಕ್ಷಿಯು ಪಕ್ಕದ ಜಮೀನದವರು ಹಾಗೂ ಪ್ರತಿವಾದಿಯರು ಇದ್ದು ಅದಕ್ಕೆ ಸಹಿಯನ್ನು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಜಮೀನಿನ ಅಳತೆ ಮಾಡಿದಾಗ ಪಕ್ಕದ ಜಮೀನದವರು ಹಾಗೂ ಪ್ರತಿವಾದಿಯರು ಸಹಿ ಮಾಡಿರುವ ಕಾಗದವನ್ನು ನಾನು ನ್ಯಾಯಾಲಯದಲ್ಲಿ ಹಾಜರು ಮಾಡಿರುವುದಿಲ್ಲ. ಸದರಿ ಕಾಗದವನ್ನು ಹಾಜರು ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. 2004 ನೇ ಇಸವಿಯಲ್ಲಿ ನಮ್ಮ ಜಮೀನು ಕಡಿಮೆ ಆಗಿದೆ ಎಂದು ನನಗೆ ತಿಳಿದು ಬಂದಿರುತ್ತದೆ.

2004 ನೇ ಇಸವಿಯಲ್ಲಿ ನಮ್ಮ ಜಮೀನು ಕಡಿಮೆ ಆಗಿರುವ ಬಗ್ಗೆ ತಿಳಿದ ನಂತರ ಯಾವುದಾದರು ಕಾನೂನು ಕ್ರಮ ಜರುಗಿಸಿರುತ್ತೀರಾ ಎಂಬ ಪ್ರಶ್ನೆಗೆ ನಮ್ಮ ಜಮೀನು ಎಲ್ಲಿ ಕಡಿಮೆ ಆಗಿದೆ ಎಂದು ತಿಳಿದುಕೊಳ್ಳಲು ಪುನಃ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. 2004 ನೇ ಇಸವಿಯಲ್ಲಿ ಯಾರು ನನ್ನ ಜಮೀನನ್ನು ಅತೀಕ್ರಮಣ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ.. ಪುನಃ 2004 ನೇ ಇಸವಿಯಲ್ಲಿ ಯಾಕಿವ ಕ್ಷೇತ್ರ ಅತೀ ಕ್ರಮಣ ಆಗಿದೆ ಎಂದು ತಿಳಿದುಕೊಳ್ಳಲು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿಯ ಮೇರೆಗೆ ಭೂ ಇಲಾಖೆಯವರು 2008 ನೇ ಇಸವಿಯಲ್ಲಿ ಅಳತೆ ಮಾಡಲು ಬಂದಿರುತ್ತಾರೆ. ಆಗ ನನ್ನ ಜಮೀನಿನ ಅಕ್ಕ ಪಕ್ಕದ ಜಮೀನಿನವರು ಇದ್ದರೂ ಆದರೇ ಕೆಲವು ಜನ ಸಹಿ ಮಾಡಿರುತ್ತಾರೆ ಹಾಗೂ ಇನ್ನೂ ಕೆಲವರು ಸಹಿ ಮಾಡಿರುವುದಿಲ್ಲ.

2. ಸದರಿ ಪುನಃ ಅಳತೆ ಮಾಡುವಾಗ ಪ್ರತಿವಾದಿಯರು ಹಾಜರು ಇದ್ದರು. ಆದರೆ ಅವರು ಸಹಿ ಮಾಡಿರುವುದಿಲ್ಲ. ಸದರಿ ಕುರಿತು ಆ ದಿನ ಯಾರು ಹಾಜರು ಇದ್ದರೂ ಹಾಗೂ ಯಾರು ಸಹಿ ಮಾಡಿರುತ್ತಾರೆ ಎಂದು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ನಾನು 2000 ಹಾಗೂ 2004 ನೇ ಇಸವಿಯಲ್ಲಿ ಭೂ ಇಲಾಖೆಯವರು ಜಮೀನನ್ನು ಅಳತೆ ಮಾಡುವಾಗ ಪ್ರತಿವಾದಿಯರಾಗಲೀ ಅಥವಾ ಅಕ್ಕ ಪಕ್ಕದ ಜಮೀನಿನ ಮಾಲಕರು ಆಗಲಿ ಯಾರು ಹಾಜರು ಇರುವುದಿಲ್ಲ ಹಾಗೂ ನಾನು ಮತ್ತು ಭೂ ಇಲಾಖೆಯವರು ಮಾತ್ರ ಇದ್ದು ಜಮೀನಿನ ಅಳತೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 20-04-2016 ರಂದು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ. 2008 ರಲ್ಲಿ ದಾವೆಯನ್ನು ಮಾಡಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ಪ್ರತಿವಾದಿಯರು ಸವಣೂರ ತಹಶೀಲ್ದಾರ ಇವರ ಬಳಿ ಡ ಉತಾರವನ್ನು ರದ್ದು ಪಡಿಸಲು ಪ್ರಕರಣವನ್ನು ಮಾಡಿರುತ್ತಾರೆ. ಸದರಿ ಪ್ರಕರಣ ನಿಖಾಲಿಯಾದ ಮೇಲೆ ಮತ್ತೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಆ ಕಾರಣ ನಾನು 2016 ನೇ ಇಸವಿಯಲ್ಲಿ ದಾವೆಯನ್ನು ಮಾಡಿರುತ್ತೇನೆ. ಪ್ರತಿವಾದಿಯರು ತಹಶೀಲ್ದಾರ ಇವರ ಬಳಿ ಸಲ್ಲಿಸಿರುವ ಪ್ರಕರಣ ಬೇರೆ ಹಾಗೂ ನನ್ನ ಆಸ್ತಿ ಕಬ್ಜಾ ಕೇಳುವ ಕುರಿತು ಪ್ರಕರಣ ಬೇರೆ ಇದ್ದು ನ್ಯಾಯಾಲಯದಲ್ಲಿ ದಾವೆಯನ್ನು ಏಕೆ ಸಲ್ಲಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆ 2 ಪ್ರಕರಣ ಬೇರೆ ಬೇರೆ ಎಂದು ಅಂದುಕೊಂಡಿರಲಿಲ್ಲ ಎಂದು ಹೇಳುತ್ತಾರೆ.

ನಿಪಿ-3 ನ್ನು 2004/05 ರಲ್ಲಿ ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು 2008 ರಲ್ಲಿ ತಯಾರು ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-3 ರ ಪ್ರಕಾರ 2008 ರಲ್ಲಿ ನನ್ನ ಜಮೀನನ್ನು ಒತ್ತುವರಿ ಮಾಡಲಾಗಿದೆ ಎಂದು ತಿಳಿದು ಬಂದರು ಕೂಡಾ 2008 ನೇ ಇಸವಿಯಲ್ಲಿ ಅದನ್ನು ಪಡೆದುಕೊಳ್ಳಲು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಮ ಕೈಗೊಂಡಿರುವ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯ ಭೂ ನ್ಯಾಯಾಲಯದಲ್ಲಿ ಪ್ರಕರಣ ದಾಖಲೆ ಮಾಡಿದ್ದರಿಂದ ನನಗೆ ತೊಂದರೆ ಆಗಿರುತ್ತದೆ ಎಂದು ಹೇಳುತ್ತಾರೆ. ನಿಪಿ-9 ನ್ನು ಸಾಕ್ಷಿಗೆ ತೋರಿಸಿ ಅದು ಜಿಲ್ಲಾಧಿಕಾರಿಗಳ ನ್ಯಾಯಾಲಯದವರ ಆದೇಶ ಇರುತ್ತದೆ ಎಂದರೆ ಸಾಕ್ಷಿಯು ಸರಿ ಎಂದು ಹೇಳುತ್ತಾರೆ. ಸದರಿ ನಿಪಿ-9 ರಲ್ಲಿ ನಾನು 3 ನೇ ಎದುರುದಾರ ಇರುತ್ತೇನೆ ಎಂದರೆ ಸರಿ. ಸಾಕ್ಷಿಗೆ ನಿಪಿ-9 ರಲ್ಲಿನ ಆದೇಶವನ್ನು ಓದಿ ಹೇಳಲಾಗಿ ಸಾಕ್ಷಿಯು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ನಿಪಿ-13 ನ್ನು ತೋರಿಸಲಾಗಿ 1980 ನೇ ಇಸವಿಯಲ್ಲಿ ಸದರಿ ಜಮೀನು 15 ಎಕರೆ 19 ಗುಂಟೆ ಇದ್ದು, ಅದರಲ್ಲಿ 4 ಎಕರೆ 6 ಗುಂಟೆ ಪೋರ್ಟ್ ಕರಾಬ ಇದ್ದು, ಕೇವಲ 11 ಎಕರೆ 13 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ನಿಪಿ-13 ರಲ್ಲಿ ನನಗೆ ಬಂದ ಜಮೀನು 2 ಎಕರೆ ಹಾಗೂ ಪ್ರತಿವಾದಿಯರಿಗೆ 4 ಎಕರೆ 13 ಗುಂಟೆ ಜಮೀನು ನಮೂದು ಆಗಿದೆ ಎಂದರೆ ಸರಿ. ಸದರಿ ನಿಪಿ-13 ರಲ್ಲಿ ಶಿವನಗೌಡ ಹೆಬ್ಬಾಳ ಇವರಿಗೆ 2 ಎಕರೆ ಜಮೀನು, ಈರವ್ವ ಪ್ಯಾಟಿ ಇವರಿಗೆ 3 ಎಕರೆ ಜಮೀನು ಎಂದು ಬರೆಯಲಾಗಿದೆ ಎಂದರೆ ಸರಿ. ಪ್ರತಿವಾದಿಯರಿಗೆ ಸಂಬಂಧಿಸಿದ ಮೂಲ ಆಸ್ತಿ 8 ಎಕರ 19 ಗುಂಟೆ ಇದ್ದು, ಅದರ ಪೈಕಿ 4 ಎಕರೆ 6 ಗುಂಟೆ ಪೋರ್ಟ್ ಕರಾಬ ವಜಾ ಹೋಗಿ ಇನ್ನೂ ಉಳಿದಿದ್ದು ಕೇವಲ 4 ಎಕರೆ 13 ಗುಂಟೆ ಜಮೀನು ಎಂದರೆ ಸರಿ. ಅದರ ಕುರಿತು ನಾನು ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ನನಗೆ 2 ಎಕರೆ ಜಮೀನು ಇದ್ದು ಅದು ಸರಿ ಇರುತ್ತದೆ.

ಆದರೂ ನಾನು ಪ್ರತಿವಾದಿಯರು ನನ್ನ 38 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ಖೊಟ್ಟಿ ಪಿ. ಟಿ. ಶೀಟ ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ಇಲಾಖೆಯವರ ಜೊತೆ ನಾನು ತುಂಬಾ ಒಳ್ಳೆಯ ಒಡನಾಟ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ 38 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.
**ಸಹಿ/-** 12-02-2020
ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.